**ಸಾಕ್ಷಿಯನ್ನು ದಿನಾಂಕಃ 29.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಎಸ್.ಎಂ, ವಕೀಲರಿಂದಃ**

ವಾದಿ ದಿನಾಂಕ 13.09.1993 ರಂದು ನಿವೇಶನ ಸಂಖ್ಯೆ-6 ನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರ ನೋಂದಣಿಯಾಗಿರುತ್ತದೆ ಎಂದರೆ ನೋಂದಣಿಯಾಗಿರಬಹುದು, ಆದರೆ ಅಸ್ತಿತ್ವದಲ್ಲಿಲ್ಲದಿರುವ ಆಸ್ತಿಯನ್ನು ಖರೀದಿಸಿರುತ್ತಾರೆ. ನಿವೇಶನ ಸಂಖ್ಯೆ-6 ನನ್ನ ಸ್ವಾಧೀನದಲ್ಲಿರುತ್ತದೆ ಎಂದು ಯಾವುದೇ ದಾಖಲಾತಿಗಳಿರುವುದಿಲ್ಲ ಎಂದರೆ ನಿವೇಶನ ಸಂಖ್ಯೆ -6 ರ ಬಗ್ಗೆ ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆ 6 ಕ್ಕೆ ಕಂದಾಯ ಪಾವತಿಸಿರುತ್ತೀರಿ ಎಂದರೆ 10 ಗುಂಟೆ ಜಮೀನಿಗೆ ಪಾವತಿಸಿರುತ್ತೇನೆ, ಆದರೆ ನಿವೇಶನ ಸಂಖ್ಯೆ -6 ಕ್ಕೆ ಪಾವತಿಸಿರುವುದಿಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ನಿವೇಶನ ಸಂಖ್ಯೆ -7 ಮತ್ತು 8 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆ -7 ಮತ್ತು 8 ರ ಮಾಲೀಕರಾದ ಶ್ರೀಮತಿ ಸುಧಾಮಣಿಯವರು ನಂಜನಗೂಡಿನ ಅಪರ ದಿವಾನಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮೂಲ ದಾವೆ ಸಂಖ್ಯೆ 78/2007 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ದಿನಾಂಕ 25.06.1963 ರಂದು ನನ್ನ ತಂದೆ ಖರೀದಿಸಿದ್ದಾರೆಂದು ಹೇಳುವ ಆಸ್ತಿಯ ಸರ್ವೆ ನಂ.70/2 ಆಗಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರಿನಲ್ಲಿದ್ದ ಆಸ್ತಿಯ ಪೈಕಿ 10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನನ್ನ ತಂದೆಯ ಹೆಸರಿನಲ್ಲಿ ಯಾವುದೇ ಪಹಣಿ ದಾಖಲಾಗಿಲ್ಲ ಎಂದರೆ ಎಲ್ಲಾ ಆಸ್ತಿಯು ಅನ್ಯಕ್ರಾಂತವಾಗಿರುತ್ತದೆ. ದಿನಾಂಕ 25.06.1963 ರ ಕ್ರಯಪತ್ರದ ಮೂಲಕ ನನ್ನ ತಂದೆ ಖರೀದಿಸಿದ್ದ ಜಮೀನಿನ ಪೂರ್ವಕ್ಕೆ- ಪುಟ್ಟನಂಜಯ್ಯ ವಗೈರೆ ಇವರ ಜಮೀನು, ಪಶ್ಚಿಮಕ್ಕೆ- ನೀಲಗಿರಿ-ಊಟಿ ರಸ್ತೆ, ಉತ್ತರಕ್ಕೆ -

ನಂಜುಂಡಯ್ಯುರವರ ಆಸ್ತಿ ಇತ್ತು, ಈಗ ಉಪ್ಪಾರರ ಹಾಸ್ಟೆಲ್ ಮತ್ತು ದಕ್ಷಿಣಕ್ಕೆ- ಕೋಡಯ್ಯು, ಸರೋಜಮ್ಮ, ವೆಂಕಟಚಲಯ್ಯುರವರ ಮನೆ ಇರುತ್ತವೆ. ಈ ಮೇಲೆ ಹೇಳಿದ ಚೆಕ್ ಬಂದಿ ದಿನಾಂಕ 25.06.1963 ರ ಕ್ರಯಪತ್ರದಲ್ಲಿ ನಮೂದಾಗಿರುತ್ತದೆ. ನನ್ನ ತಂದೆ ಮೂಲತಃ ಕ್ರಯಕ್ಕೆ ಪಡೆದ ಜಮೀನು ವ್ಯವಸಾಯದ ಜಮೀನಾಗಿರುತ್ತದೆ ಎಂದರೆ ಸರಿ. ನನ್ನ ತಂದೆ 10 ಗುಂಟೆ ಜಮೀನನ್ನು ಮತ್ತು ನಮ್ಮ ಜಮೀನಿನ ಉತ್ತರಕ್ಕಿರುವ ಹೆಚ್.ಎಂ.ಎನ್ ನಾಗಮಹದೇವಪ್ಪ ಇಬ್ಬರು ಸೇರಿ ಜಂಟಿಯಾಗಿ ವ್ಯವಸಾಯೇತರ ಉದ್ದೇಶಕ್ಕಾಗಿ ಅನ್ಯಕ್ರಾಂತ ಮಾಡಿಸಿರುತ್ತಾರೆ. ಸದರಿ ನಾಗಮಹದೇವಪ್ಪ ಮಸಣಶೆಟ್ಟಿರವರಿಗೆ ಮಾರಾಟ ಮಾಡಿದ್ದು, ಈಗ ಅಲ್ಲಿ ಉಪ್ಪಾರ ಹಾಸ್ಟೆಲ್ ಇರುತ್ತದೆ. ಅನ್ಯಕ್ರಾಂತ ಮಾಡಿಸಿದ್ದ 10 ಗುಂಟೆ ಈ ಮೊದಲು ಕಳಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದ್ದು, ಪ್ರಸ್ತುತ ದೇವಿರಮ್ಮನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಟ್ಟಿರುತ್ತದೆ. ಸದರಿ ಪಂಚಾಯಿತಿಯಿಂದ ನನ್ನ ತಂದೆಯ ಹೆಸರಿಗೆ ಅಸೆಸ್ ಮೆಂಟ್ ದಾಖಲಾಗಿಲ್ಲ, ಆದರೆ ನನ್ನ ತಾಯಿಯ ಹೆಸರಿನಲ್ಲಿ ಆಗಿರುತ್ತದೆ. ಅನ್ಯಕ್ರಾಂತ ಮಾಡಿಸುವ ಸಮಯದಲ್ಲಿ ನಕ್ಷೆ ಮಾಡಿಸಿದ್ದರೊ ಇಲ್ಲವೋ ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆ -6 ರ ಪೂರ್ವ ಮಾಲೀಕರು ಒಂದು ಬಡಾವಣೆ ಮಾಡಿದ್ದರು ಎಂದರೆ ಸರಿಯಲ್ಲ. ನಿವೇಶನ ಸಂಖ್ಯೆ -6 ಕ್ಕೆ ಸಂಬಂಧಿಸಿದಂತೆ ಪಂಚಾಯಿತಿಯವರು ವಾದಿಯ ಹೆಸರಿಗೆ ಅಸೆಸ್ ಮೆಂಟ್ ದಾಖಲಿಸಿದ್ದರು ಎಂದರೆ ಅದು ವಜಾ ಆಗಿರುತ್ತದೆ. ಶ್ರೀಮತಿ ಸುಧಾಮಣಿಯವರು ಸಲ್ಲಿಸಿದ್ದ ದಾವೆಯಲ್ಲಿ ನಾನು ಹಾಜರಾಗಿ ತಕರಾರು ಸಲ್ಲಿಸಿದ್ದೆ ಎಂದರೆ ಸರಿ. ನಾನು ತಕರಾರು ಸಲ್ಲಿಸುವ ಸಮಯದಲ್ಲಿ ನಿವೇಶನ ಸಂಖ್ಯೆ -7 ಮತ್ತು 8 ನಮ್ಮ ಜಮೀನಿನ ಸರ್ವೆ ನಂ. 70/2 ರಲ್ಲಿ ಬರುವುದಿಲ್ಲವೆಂದು ಹೇಳಿರುತ್ತೇನೆ. ಮೂಲ ದಾವೆ ಸಂಖ್ಯೆ 78/2007 ರಲ್ಲಿ ಸರ್ವೆ ನಂ. 70/2 ಪ್ರದೇಶವನ್ನು ನಿರ್ದಿಷ್ಟವಾಗಿ ಗುರುತಿಸಿಕೊಳ್ಳಲು

ವಿಫಲರಾಗಿರುತ್ತಾರೆ ಎಂದು ನಮೂದಾಗಿದೆ ಎಂದರೆ ಸರಿ, ಆದರೆ ನಿವೇಶನ ಸಂಖ್ಯೆ -7 ಮತ್ತು 8 ಕ್ಕೂ ಮತ್ತು ನಮ್ಮ ಜಮೀನಿಗು ಸಂಬಂಧವಿರುವುದಿಲ್ಲವೆಂದು ಚರ್ಚೆ ಮಾಡಿರುತ್ತದೆ. ನಿವೇಶನ ಸಂಖ್ಯೆ -6 ರಿಂದ 8 ನಮ್ಮ ಜಮೀನಿನ ಸರ್ವೆ ನಂ. 70/2 ರಲ್ಲಿ ಬರುವುದಿಲ್ಲ. ಮೂಲ ದಾವೆ ಸಂಖ್ಯೆ -78/2007 ರಲ್ಲಿ ಆದ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಆರ್.ಎ 5/2010 ರಂತೆ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿಯು ಕೂಡ ವಜಾಯಾಗಿರುತ್ತದೆ ಎಂದರೆ ಸರಿ. ನಿಡಿ-2 ರಲ್ಲಿ ನಮೂದಿಸಿರುವ ಚೆಕ್ ಬಂದಿ ಮತ್ತು ದಾವಾ ಸ್ವತ್ತಿನ ಚೆಕ್ ಬಂದಿ ಬೇರೆ-ಬೇರೆಯಾಗಿರುತ್ತವೆ ಎಂದರೆ ಸರಿ. ನಿಡಿ-3 ರ ಕ್ರ.ಸಂ-4 ರಲ್ಲಿ ನಮೂದಿಸಿರುವಂತೆ ಸರ್ವೆ ನಂ-70 ರ ಪೈಕಿ ಎಂದು ನಮೂದಿಸಿದ್ದು, ಸರ್ವೆ ನಂ.70/2 ಎಂದು ನಮೂದಿಸಿಲ್ಲ ಎಂದರೆ ಸರಿ. ನನ್ನ ತಂದೆ ಮೃತಪಟ್ಟ ನಂತರ ನನ್ನ ತಾಯಿ ಪಂಚಾಯಿತಿಗೆ ಅರ್ಜಿ ಸಲ್ಲಿಸಿ 10 ಗುಂಟೆ ಜಮೀನಿನ ಅಸೆಸ್ ಮೆಂಟನ್ನು ತನ್ನ ಹೆಸರಿಗೆ ಮಾಡಿಸಿಕೊಡುವಂತೆ ಅರ್ಜಿ ಸಲ್ಲಿಸಿದ್ದು, ಅಸೆಸ್ ಮೆಂಟ್ ದಾಖಲಾಗಿರುವುದಿಲ್ಲ. ನಿಡಿ-15 ರ 10 ಗುಂಟೆ ಜಾಗಕ್ಕೆ ಸಂಬಂಧಿಸಿದಂತೆ ನನ್ನ ಹೆಸರಿಗೆ ನಮೂದಾಗಿರುವ ನಮೂನೆ-9 ಎಂದರೆ ಸರಿ. ನಿಡಿ-15 ರಲ್ಲಿ ನಮೂದಿಸಿರುವ ಚೆಕ್ ಬಂದಿ ಮತ್ತು ದಾವಾ ಸ್ವತ್ತಿನ ಚೆಕ್ ಬಂದಿ ಬೇರೆ-ಬೇರೆಯಾಗಿರುತ್ತವೆ ಎಂದರೆ ಸರಿ. ನಿಡಿ-15 ದಾವಾ ಸ್ವತ್ತಿನ ನಿವೇಶನಕ್ಕೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ಕಂದಾಯ ಪಾವತಿ ರಶೀದಿಗಳು, ಅಂದರೆ ನಿಪಿ-20 ರಿಂದ 25 ನಮ್ಮ 10 ಗುಂಟೆ ಜಾಗಕ್ಕೆ ಸಂಬಂಧಪಟ್ಟ ದಾಖಲೆಗಳಾಗಿರುತ್ತವೆ. ನಿಡಿ-29 ರಂತೆ ಆಗಿರುವ ತೀರ್ಪಿನಲ್ಲಿ ಓ.ಎಸ್ 213/2004 ರಲ್ಲಿ ಈ ಪ್ರಕರಣದ ವಾದಿ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ನಿಡಿ-30 ರಲ್ಲಿ ನಮೂದಿಸಿರುವ ಚೆಕ್ ಬಂದಿ ಮತ್ತು ಈ ಪ್ರಕರಣದಲ್ಲಿ ನಮೂದಿಸಿರುವ ನಿವೇಶನ

ಸಂಖ್ಯೆ-6ರ ಚೆಕ್ ಬಂದಿ ಬೇರೆ-ಬೇರೆಯಾಗಿರುತ್ತವೆ ಎಂದರೆ ಸರಿ. ವಾದಿಗೆ ಮಾರಾಟ ಮಾಡಿದ ಪೂರ್ವ ಮಾಲೀಕರಾದ ಶ್ರೀಮತಿ ಸುಧಾರಾಣಿಯವರು ದಿನಾಂಕ 16.05.1990ರಲ್ಲಿ ನೋಂದಾಯಿತ ಕ್ರಯಪತ್ರದ ಮೂಲಕ ನಿವೇಶನ ಸಂಖ್ಯೆ-6ನ್ನು ಖರೀದಿಸಿದ್ದರು ಎಂದರೆ ಅದು ಅಸ್ತಿತ್ವದಲ್ಲಿಲ್ಲದಿರುವ ಆಸ್ತಿಯ ಸೃಷ್ಟಿ ಮಾಡಿದ ಕ್ರಯಪತ್ರವಾಗಿರುತ್ತದೆ. ನಾನು ಸದರಿ ಸುಧಾರಾಣಿಯವರ ವಿರುದ್ಧವಾಗಲಿ ಅಥವಾ ವಾದಿಯ ವಿರುದ್ಧವಾಗಲಿ ಕ್ರಯಪತ್ರಗಳನ್ನು ಪ್ರಶ್ನೆ ಮಾಡಿ ದಾವೆ ಸಲ್ಲಿಸಿಲ್ಲ. ಈ ಮೇಲೆ ಹೇಳಿದ ಸುಧಾರಾಣಿಯವರ ಹೆಸರಿಗೂ ಪಂಚಾಯಿತಿಯಿಂದ ಅಸೆಸ್ ಮೆಂಟ್ ದಾಖಲಾಗಿತ್ತು ಎಂದರೆ ಅದು ವಜಾ ಆಗಿದೆ.

ಈ ಪ್ರಕರಣದ ವಾದಿ ನಿವೇಶನ ಸಂಖ್ಯೆ-6ರಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಿವೇಶನ ಸಂಖ್ಯೆ-6ರಲ್ಲಿ ನಾನೇ ಸ್ವಾಧೀನದಲ್ಲಿರುತ್ತೇನೆ. ಸಾಕ್ಷಿಯು ಸ್ವತಃ ಮುಂದುವರಿದು ತನ್ನ ಪಿತ್ರಾರ್ಜಿತ ಸ್ವತ್ತಾದ 10 ಗುಂಟೆ ಜಮೀನಿನಲ್ಲಿ ತಾನೇ ಸ್ವಾಧೀನದಲ್ಲಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ "The Plaintiff is claiming that, his site situates in the property of 0.10 guntas of site belonging to this Defendant." ಎಂದು ವಾದಿ ತನ್ನ ವಾದಪತ್ರದಲ್ಲಾಗಲಿ ಅಥವಾ ಪ್ರಮಾಣಪತ್ರದಲ್ಲಾಗಲಿ ಹೇಳಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆ -6ನ್ನು ನಾನಾಗಲಿ ಅಥವಾ ನಮ್ಮ ಕುಟುಂಬದವರಾಗಲಿ, ನೋಂದಾಯಿತ ದಾಖಲೆ ಮೂಲಕ ಖರೀದಿಸಿರುವುದಿಲ್ಲ ಎಂದರೆ ನಿವೇಶನ ಸಂಖ್ಯೆ -6 ಅಸ್ತಿತ್ವದಲ್ಲಿಲ್ಲದೆ ಇರುವುದರಿಂದ ಖರೀದಿಸುವ ಪ್ರಶ್ನೆಯೆ ಉದ್ಭವಿಸುವುದಿಲ್ಲ.

ನಿಡಿ-18 ನನ್ನ ತಂದೆಗೆ ಸಂಬಂಧಪಟ್ಟ ಆಸ್ತಿಯ ದಾಖಲೆಯಾಗಿರುತ್ತದೆ, ಆದರೆ ನಿವೇಶನ ಸಂಖ್ಯೆ -6 ಕ್ಕೆ ಸಂಬಂಧಪಟ್ಟ ದಾಖಲೆಯಾಗಿರುವುದಿಲ್ಲ. ಸರ್ವೆ ನಂ.70/2 ರಲ್ಲಿ ಅನ್ಯಕ್ರಾಂತವಾದ 10 ಗುಂಟೆ ಜಮೀನು ನನ್ನ ಮತ್ತು ನನ್ನ ತಂದೆ ಹೆಸರನ್ನು ಹೊರತುಪಡಿಸಿ ಬೇರೆಯವರ ಹೆಸರಿಗೆ ಅಸೆಸ್ ಮೆಂಟ್ ದಾಖಲಾಗಿರುವುದಿಲ್ಲ. ನಿವೇಶನ ಸಂಖ್ಯೆ -6 ಕ್ಕೆ ಸಂಬಂಧಿಸಿದಂತೆ ಅಸೆಸ್ ಮೆಂಟ್ ದಾಖಲಿಸುವಂತೆ ನ್ಯಾಯಾಲಯದಿಂದ ಆದೇಶವಾಗಿಲ್ಲ ಎಂದರೆ ಸದರಿ ಆಸ್ತಿ ಅಸ್ತಿತ್ವದಲ್ಲಿರುವುದಿಲ್ಲ. ನಿಡಿ-19 ರಲ್ಲಿ ಉಲ್ಲೇಖಿಸಿರುವಂತೆ ಸರ್ವೆ ನಂ. 70/2 ರ 10 ಗುಂಟೆ ನಿವೇಶನ ಇದ್ದು, ಅದರ ಖಾತೆಯನ್ನು ಬೇರೆಯವರಿಗೆ ಮಾಡಿದ್ದು, ನಮ್ಮ ಹೆಸರಿಗೆ ಮಾಡಿಕೊಡುವಂತೆ ಮನವಿ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ 10 ಗುಂಟೆ ಜಮೀನಿನ ಖಾತೆ ಯಾರ ಹೆಸರಿಗೆ ದಾಖಲಾಗಿತ್ತು ಎಂದರೆ ನಮ್ಮ ಹೆಸರಿನಲ್ಲಿಯೆ ಇತ್ತು. ನಿಡಿ-19 ರ ಪ್ರಕಾರ ಮನವಿದಾರರ ನಿವೇದನೆಯನ್ನು ಪರಿಶೀಲಿಸಿ, ಕ್ರಮ ಕೈಗೊಳ್ಳುವಂತೆ ಏಕೆ ಆದೇಶ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಹೇಳಿದಂತೆ ಸರ್ವೆ ನಂ.70/2 ರಲ್ಲಿರುವ 10 ಗುಂಟೆ ಆಸ್ತಿ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ಅಸ್ತಿತ್ವದಲ್ಲಿಲ್ಲದಿರುವ 10 ಗುಂಟೆ ಆಸ್ತಿಗೆ ಕ್ರಯಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಅಸ್ತಿತ್ವದಲ್ಲಿಲ್ಲದಿರುವ 10 ಗುಂಟೆ ಆಸ್ತಿಗೆ ಪಂಚಾಯಿತಿಯಿಂದ ನನ್ನ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. 10 ಗುಂಟೆ ಜಮೀನು ನಮ್ಮ ಕುಟುಂಬದ 7 ಜನ ಸದಸ್ಯರ ನಡುವೆ ವಿಭಾಗವಾಗಿರುತ್ತದೆ. ನಮ್ಮ 7 ಜನ ಹೆಸರಿನಲ್ಲಿ ಪ್ರತ್ಯೇಕವಾಗಿ ನಮೂನೆ-9 ನ್ನು ನೀಡಿರುತ್ತಾರೆ. ಅದು ಕೂಡ ಅಸ್ತಿತ್ವದಲ್ಲಿಲ್ಲದೆ ಇರುವ ಆಸ್ತಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಓ ಎಸ್ 78/2007 ರಲ್ಲಿ ನಮೂದಿಸಿರುವ ನಿವೇಶನ ಸಂಖ್ಯೆ-7 ಮತ್ತು 8 ರ ಪಕ್ಕದಲ್ಲಿರುವ ನಿವೇಶನ ಸಂಖ್ಯೆ-6 ಸದರಿ ಬಡಾವಣೆ ನಕ್ಷೆಯಲ್ಲಿರುವ

ಆಸ್ತಿಯಾಗಿರುತ್ತದೆ ಎಂದರೆ ಯಾವುದೇ ಬಡಾವಣೆಯಾಗಿರುವುದಿಲ್ಲ. ವಾದಿ ದಾವಾ ಸ್ವತ್ತಿನ ಮಾಲೀಕತ್ವ ಹೊಂದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**